ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನಸೌಧ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE 25/6/2020

# ಶಕ್ತಿಸೌಧಗಳ ಸಿಬ್ಬಂದಿ ಸುರಕ್ಷತೆ ಇಂದು ಸಭಾಧ್ಯಕ್ಷರ ಮಹತ್ವದ ಸಭೆ

25/6/20

ಸಂ.ಕ.ಸಮಾಚಾರ, ಬೆಂಗಳೂರು

ಶಾಸಕರ ಶಕ್ತಿ ಕೇಂದ್ರ ವಿಧಾನಸೌಧ, ವಿಕಾಸಸೌಧ, ಶಾಸಕರ ಭವನ ಮತ್ತು ಬಹುಮಹಡಿಗಳ ಕಟ್ಟಡದಲ್ಲಿ ಕೋವಿಡ್ 19 ಸೋಂಕಿತರು ಕಂಡು ಬಂದ ಹಿನ್ನೆಲೆ ಮುಂಜಾಗ್ರತಾ ಕ್ರಮದ ಕುರಿತು ಚರ್ಚಿಸಲು ವಿಧಾನಸಭಾಧ್ಯಕ್ಷ ಮತ್ತು ಮೇಲ್ಮನೆ ಸಭಾಪತಿಗಳ ನೇತೃತ್ವದಲ್ಲಿ ಗುರುವಾರ ಜಂಟಿ ಸಭೆ ಕರೆಯಲಾಗಿದೆ.

ವಿಧಾನಸೌಧ ಮತ್ತು ವಿಕಾಸಸೌಧ ಸೇರಿದಂತೆ ಇಲ್ಲಿ ಕೆಲಸ ಮಾಡುವ ನಾಲ್ವರು ಸಿಬ್ಬಂದಿಗೆ ಈಗಾಗಲೇ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದ್ದು, ಸೋಂಕಿತರಿಂದ ಉಳಿದವರನ್ನು ರಕ್ಷಣೆ ಮಾಡುವ ಕ್ರಮಗಳ ಸಭೆಯಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಲಾಗುತ್ತದೆ ಎಂದು ಸಭಾಪತಿ ತಿಳಿಸಿದ್ದಾರೆ. ಗುರುವಾರ ಬೆಳಗ್ಗೆ 11 ಗಂಟೆಗೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಸಭಾಪತಿ ಪ್ರತಾಪ್ ಚಂದ್ರ ಶೆಟ್ಟಿಯವರು ಇದರಲ್ಲಿ ಭಾಗವಹಿಸಲಿದ್ದು, ಕೊರೊನಾ ಸೋಂಕಿತರಿಂದ ರಕ್ಷಣೆ ಪಡೆಯಲು ನಮ್ಮ ಸಿಬ್ಬಂದಿ ಯಾವೆಲ್ಲ ಕ್ರಮಗಳನ್ನು ಅನುಸರಿಸಬೇಕೆಂಬ ಬಗ್ಗೆ ಚರ್ಚಿಸಲಿದ್ದಾರೆ.

## ಸಾರ್ವಜನಕಿ ಪ್ರವೇಶ ನಿರ್ಬಂಧ

ಲಿಫ್ಟ್‌ಮನ್, ಆಹಾರ ಇಲಾಖೆಯ ಮಹಿಳಾ ಸಿಬ್ಬಂದಿ ಸೇರಿದಂತೆ ವಿಧಾನಸೌಧ ಮತ್ತು ವಿಕಾಸಸೌಧದಲ್ಲಿ ಕೆಲಸ ಮಾಡುವ ನಾಲ್ವರಲ್ಲಿ ಕೊರೊನಾ ಸೋಂಕು ಪತ್ತೆಯಾದ ಹಿನ್ನೆಲೆ ವಿಧಾನಸೌಧದಲ್ಲಿ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿದೆ. ಸಂಬಂಧಿಸಿದ ಇಲಾಖೆಗಳ ಸಚಿವರನ್ನು ಭೇಟಿಯಾಗಬಯಸುವಂಥವರು ಪ್ರತಿ ದಿನ ಮಧ್ಯಾಹ್ನ 3.30 ರ ನಂತರ ಆಗಮಿಸಬಹುದು ಎಂದು ಬಿಬಿಎಂಪಿ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.